## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ತುಮಕೂರು

## ವಿಶೇಷ ಮೊಕದ್ದಮೆ ಸಂಖ್ಯೆ.468/2022

**ಫಿರ್ಯಾದುದಾರರು:**

ರಾಜ್ಯದ ಪರವಾಗಿ ತುಮಕೂರು ಸಿ.ಇ.ಎನ್. ಪೋಲೀಸ್

ವಿರುದ್ಧ

**ಆರೋಪಿತರು :** ಃ ಅಸಾದುಲ್ಲಾ ಶರೀಫ್ ಮತ್ತು ಇತರರು

3 ನೇ ಆರೋಪಿಯ ಹೆಸರು : ನವಾಜ್

ತಂದೆಯ ಹೆಸರು : ಫಯಾಜ್

ವಯಸ್ಸು : 25 ವರ್ಷ

ಉದ್ಯೋಗ : ವಾಷಿಂಗ್ ಮೆಶಿನ್ ರಿಪೇರಿ

ವಾಸಸ್ಥಳ : ನಂ.271/3, 3 ನೇ ಮುಖ್ಯ ರಸ್ತೆ, ಗಂಗಮ್ಮ ದೇವಸ್ಥಾನದ ಹತ್ತಿರ, ಮಂಗಮ್ಮನಪಾಳ್ಯ, ಬೆಂಗಳೂರು ದಕ್ಷಿಣ, ಬೆಂಗಳೂರು.

### ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿಯ ಹೇಳಿಕೆ

ಪ್ರಶ್ನೆ-1: ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ಮಾಡಿದ ಸಾಕ್ಷಿಗಳ ಸಾಕ್ಷ್ಯವನ್ನು ನೀವು ಕೇಳಿದ್ದೀರಾ?

ಉತ್ತರಃ ಹೌದು

ಪ್ರಶ್ನೆ 2: ಪ್ರಾ ಸಾ 1 ಕರಿಯಪ್ಪ, ಕಂದಾಯ ಅಧಿಕಾರಿ ಮತ್ತು ಪ್ರಾ ಸಾ 3 ಸುಮ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ತುಮಕೂರು ಮಹಾನಗರ ಪಾಲಿಕೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿ.06.06.2022 ರಂದು ಸಿಇಎನ್ ಪೋಲೀಸ್ ಠಾಣೆಯಿಂದ ಗಾಂಜಾ ಪ್ರಕರಣದಲ್ಲಿ ಪಂಚನಾಮೆ ಮಾಡುವ ಸಲುವಾಗಿ ಸರ್ಕಾರಿ ನೌಕರರನ್ನು ಪಂಚರಾಗಿ ಹಾಗೂ ಪತ್ರಾಂಕಿತ ಅಧಿಕಾರಿಯನ್ನು ಕಳುಹಿಸಿಕೊಡಬೇಕೆಂದು ಪತ್ರ ಬಂದ ಮೇರೆಗೆ ಮಹಾನಗರ ಪಾಲಿಕೆಯ ಆಯುಕ್ತರು ಆತನನ್ನು, ಪತ್ರಾಂಕಿತ ಅಧಿಕಾರಿಯಾಗಿ ಆಕೆಯನ್ನು ಮತ್ತು ಗಂಗರಾಜು, ದ್ವಿತೀಯ ದರ್ಜೆ ಸಹಾಯಕರನ್ನು ಸಿಇಎನ್ ಪೋಲೀಸ್ ಠಾಣೆಗೆ

ಹೋಗಲು ಹೇಳಿ ಅಧಿಕೃತ ಜ್ಞಾಪನ ಪತ್ರವನ್ನು ನೀಡಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ : ಸುಳ್ಳು

ಪ್ರಶ್ನೆ 3 : ಪ್ರಾ ಸಾ 1 ಮತ್ತು ಪ್ರಾ ಸಾ 3 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರಂತೆ ಮಧ್ಯಾಹ್ನ 12.15 ಗಂಟೆಗೆ ತಾವು ಮೂರು ಮಂದಿ ಸಿಇಎನ್ ಪೋಲೀಸ್ ಠಾಣೆಗೆ ಹೋದಾಗ ಸಿಇಎನ್ ಪೋಲೀಸ್ ಠಾಣೆಯ ಪೋಲೀಸ್ ಉಪ ನಿರೀಕ್ಷಕರಾದ ಶ್ರೀಮತಿ.ಶಮೀನ್ ಮತ್ತು ಕಾನೂನು ಮತ್ತು ಮಾಪನ ಶಾಸ್ತ್ರ ಇಲಾಖೆಯ ರಾಘವೇಂದ್ರ ಇದ್ದು, ಪೋಲೀಸ್ ಉಪ ನಿರೀಕ್ಷಕರು ಮರಳೂರು ದಿಣ್ಣೆ ಅಂಕಿತ ಸ್ಕೂಲ್ ನ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಇಬ್ಬರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ, ಆದ್ದರಿಂದ ಪಂಚರಾಗಿ ಸಹಕರಿಸಬೇಕೆಂದು ಕೋರಿ ನೋಟೀಸನ್ನು ನೀಡಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ : ಸುಳ್ಳು

ಪ್ರಶ್ನೆ 4 : ಪ್ರಾ ಸಾ 1 ಮತ್ತು 3 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪೋಲೀಸರ ಜೊತೆಗೆ ಪೋಲೀಸ್ ಜೀಪಿನಲ್ಲಿ ಸಿಇಎನ್ ಪೋಲೀಸ್ ಠಾಣೆಯಿಂದ ಮರಳೂರು ದಿಣ್ಣೆ ಹತ್ತಿರದ ಅಂಕಿತ ಸ್ಕೂಲ್ ನ ಹತ್ತಿರ ಹೋಗಿ ಮಾವಿನ ತೋಪಿನ ಹತ್ತಿರ ವಾಹನ ನಿಲ್ಲಿಸಿದಾಗ ಕೆಎ-01/ಎಂ.ಡಿ-5009 ಟಾಟಾ ಸಫಾರಿ ವಾಹನ ನಿಂತುಕೊಂಡಿತ್ತು, ಟಾಟಾ ಸಫಾರಿ ವಾಹನ ಇದ್ದ ಸ್ಥಳದಲ್ಲಿ ಹೆಚ್ ಸಿ ಶಾಂತಕುಮಾರ್, ಹೆಚ್ ಸಿ ಸೈಮನ್ ವಿಕ್ಟರ್ ಮತ್ತು ಹೆಚ್ ಸಿ ಇನಾಯತುಲ್ಲಾ ಖಾನ್ ರವರು ಇಬ್ಬರು ಆಸಾಮಿಗಳ ಜೊತೆಗೆ ನಿಂತಿದ್ದರು, ಸದರಿ ಆಸಾಮಿಗಳು ಆರೋಪಿತರಾದ ನೀವು ಆಗಿದ್ದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ : ಸುಳ್ಳು

ಪ್ರಶ್ನೆ 5 : ಪ್ರಾ ಸಾ 3 ಸುಮ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಆಕೆ ನಿಮ್ಮ ಒಪ್ಪಿಗೆಯ ಮೇರೆಗೆ ನಿಮ್ಮ ಅಂಗಶೋಧನೆ ಮಾಡಿ, ನಿಮ್ಮನ್ನು ನೀವು ಏಕೆ ಇಲ್ಲಿದ್ದೀರಿ ಎಂದು ಕೇಳಿದಾಗ ಗಾಂಜಾ ತಂದು ಕಾರಿನಲ್ಲಿ ಕುಳಿತು ಪ್ಯಾಕೇಟ್ ಗಳನ್ನಾಗಿ

ಮಾಡಿ, ಸಾರ್ವಜನಿಕರಿಗೆ ಮಾರಾಟ ಮಾಡುವ ಸಲುವಾಗಿ ಇದ್ದೇವೆ ಎಂದು ಹೇಳಿದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ : ಸುಳ್ಳು

ಪ್ರಶ್ನೆ 6 : ಪ್ರಾ ಸಾ 1 ಮತ್ತು 3 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನೀವು ತಂದಿದ್ದ ಗಾಂಜಾವನ್ನು ಎಲ್ಲಿಟ್ಟಿದ್ದೀರೆಂದು ಕೇಳಿದಾಗ ಕಾರಿನ ಒಳಗಡೆ ಇದ್ದಂತಹ ಒಂದು ಪ್ಯಾಕೇಟನ್ನು ತೆಗೆದು 1 ನೇ ಆರೋಪಿ ಅಸಾದುಲ್ಲಾ ಶರೀಫ್ ನೀನು ತೋರಿಸಿದ್ದು, ಆ ಪ್ಯಾಕೇಟನ್ನು ರಾಘವೇಂದ್ರ ರವರು ತಂದಂತಹ ಡಿಜಿಟಲ್ ತೂಕದ ಯಂತ್ರದಲ್ಲಿ ತೂಕ ಮಾಡಿದಾಗ 7 ಕೆಜಿ 82 ಗ್ರಾಂ ಬೀಜಮಿಶ್ರಿತ ಗಾಂಜಾ ಸಿಕ್ಕಿತು, ಅದನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ, ಸೀಲ್ ಮಾಡಿ, ನಂತರ ಆ ಪ್ಯಾಕೇಟನ್ನು ತೂಕ ಮಾಡಿದಾಗ 7 ಕೆಜಿ 138 ಗ್ರಾಂ ಬಂದಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 7 : ಪ್ರಾ ಸಾ 1 ಮತ್ತು 3 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಸಾದುಲ್ಲಾ ಶರೀಫ್ ನಿನ್ನ ಬಳಿ ಜಿಪ್ ಇರುವಂತಹ ಪ್ಲಾಸ್ಟಿಕ್ ಕವರ್ ಇದ್ದು, ಅದರಲ್ಲಿ ಎಂಡಿಎಂಎ ಕ್ರಿಸ್ಟಲ್ ಇತ್ತು, ಅದನ್ನು ತೂಕ ಮಾಡಿದಾಗ ಅದು 4.05 ಗ್ರಾಂ ಇತ್ತು, ಅದನ್ನು ಬಿಳಿ ತಿಳಿ ಹಾಳೆಯಲ್ಲಿ ಹಾಕಿ, ಪ್ಯಾಕ್ ಮಾಡಿ, ಸೀಲ್ ಮಾಡಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ : ಸುಳ್ಳು

ಪ್ರಶ್ನೆ 8 : ಪ್ರಾ ಸಾ 1 ಮತ್ತು 3 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿ ಅಯೂಬ್ ಪಾಷ ನಿನ್ನನ್ನು ವಿಚಾರಿಸಿದಾಗ ನಿನ್ನ ಬಳಿ ಗಾಂಜಾ ಇತ್ತು, ಅದನ್ನು ರಾಘವೇಂದ್ರ ರವರು ತೂಕ ಮಾಡಿದಾಗ 2 ಕೆಜಿ 849 ಗ್ರಾಂ ಇತ್ತು, ಅದನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ, ಸೀಲ್ ಮಾಡಿ, ನಂತರ ಮತ್ತೊಮ್ಮೆ ತೂಕ ಮಾಡಿದಾಗ ಒಟ್ಟು ತೂಕ 2 ಕೆಜಿ 892 ಗ್ರಾಂ ಬಂತು, ಅದನ್ನು ಪ್ಯಾಕ್ ಮಾಡಲು ಬಳಸುತ್ತಿದ್ದ 25 ಚಿಕ್ಕ ಪ್ಲಾಸ್ಟಿಕ್ ಜಿಪ್ ಲಾಕ್ ಖಾಲಿ ಕವರ್ ಗಳು ಸಿಕ್ಕವು, ಅವುಗಳನ್ನೂ ಪ್ಯಾಕ್ ಮಾಡಿ, ಸೀಲ್ ಮಾಡಿ, ಅಮಾನತ್ತುಪಡಿಸಿಕೊಂಡು, ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಿದ್ದು, ಅದಕ್ಕೆ

ಅವರು ಸಹಿ ಮಾಡಿರುವುದಾಗಿ ಹಾಗೂ ಆ ಸಮಯದಲ್ಲಿ ಫೋಟೋ ತೆಗೆದರು ಮತ್ತು ವಿಡಿಯೋ ಮಾಡಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 9 : ಪ್ರಾ ಸಾ 1 ಮತ್ತು 3 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಿಮ್ಮನ್ನು ಗಾಂಜಾದ ಬಗ್ಗೆ ವಿಚಾರಿಸಿದಾಗ ಮಹಾರಾಷ್ಟ್ರದಿಂದ ಬಂದ ಪೂನಾ-ಬೆಂಗಳೂರು ಹೈ-ವೇಯಲ್ಲಿ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದ ಸರ್ವೀಸ್ ರಸ್ತೆಯಲ್ಲಿರುವ ESSAR ಪೆಟ್ರೋಲ್ ಬಂಕ್ ಮುಂಭಾಗದಲ್ಲಿದ್ದಂತಹ ಲಾರಿಯವರಿಂದ 50 ಸಾವಿರ ರೂ. ಕೊಟ್ಟು ಖರೀದಿ ಮಾಡಿದ್ದೇವೆಂದು ಹೇಳಿ, ಅವರುಗಳನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ನೀವು ತೋರಿಸಿದ ಸ್ಥಳದಲ್ಲಿ ಪೋಲೀಸರು ಮಹಜರ್ ಬರೆದು, ಫೋಟೋ ತೆಗೆದರು ಹಾಗೂ ಸದರಿ ಮಹಜರಿಗೆ ಅವರು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 10 : ಪ್ರಾ ಸಾ 2 ರವೀಶ್ ಚಂದ್ರ ಎಸ್., ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ದಿ.17.06.2022 ರಂದು ತುಮಕೂರಿನ 3 ನೇ ಅಧಿಕ ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಕ್ಕೆ ಗಾಂಜಾ ಸೊಪ್ಪು, ಕಡ್ಡಿಗಳನ್ನು ಮತ್ತು ಎಂಡಿಎಂಎ ಪೌಡರನ್ನು ತೂಕ ಮಾಡುವ ಸಲುವಾಗಿ ಆತನ ಮೇಲಧಿಕಾರಿಗಳು ಕೊಟ್ಟ ನಿರ್ದೇಶನದಂತೆ ಸಂಜೆ 5.00 ಗಂಟೆಗೆ ಹೋಗಿ, ಅಲ್ಲಿ ಹಾಜರುಪಡಿಸಿದ ಗಾಂಜಾ ಸೊಪ್ಪು, ಕಡ್ಡಿ ಮತ್ತು ಎಂಡಿಎಂಎ ಪೌಡರುಗಳನ್ನು ತೂಕ ಮಾಡಿರುವುದಾಗಿ ಹಾಗೂ ಗಾಂಜಾ ಸೊಪ್ಪು ಮತ್ತು ಎಂಡಿಎಂಎ ಪೌಡರ್ ಗಳಿಂದ ಸ್ಯಾಂಪಲ್ ತೆಗೆದು, ಸೀಲ್ ಮಾಡಿದ ನಂತರ ಮಾಡಿದ ಇನ್ವೆಂಟರಿ ಮಹಜರಿಗೆ ಆತ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 11 : ಪ್ರಾ ಸಾ 4 ರಾಘವೇಂದ್ರ ಹೆಚ್. ನಿರೀಕ್ಷಕರು, ಕಾನೂನು ಮತ್ತು ಮಾಪನ ಶಾಸ್ತ್ರ ಇಲಾಖೆ ಇವರು ತಮ್ಮ ಸಾಕ್ಷ್ಯದಲ್ಲಿ ದಿ.06.06.2022 ರಂದು ಸಿಇಎನ್ ಪೋಲೀಸ್

ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಕೋರಿಕೆಯ ಮೇರೆಗೆ ಮೇಲಾಧಿಕಾರಿಗಳ ಆದೇಶದಂತೆ ಆತ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಸಿಇಎನ್ ಪೋಲೀಸ್ ಠಾಣೆಗೆ ಹೋಗಿ ಹಾಜರಾಗಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 12 : ಪ್ರಾ ಸಾ 4 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆತ ಸಿಇಎನ್ ಪೋಲೀಸ್ ಠಾಣೆಗೆ ಹೋದಾಗ ಸಿಇಎನ್ ಪೋಲೀಸ್ ಠಾಣೆಯ ಪೋಲೀಸ್ ಉಪ ನಿರೀಕ್ಷಕರಾದ ಶ್ರೀಮತಿ ಶಮೀನ್ ರವರು, ಪತ್ರಾಂಕಿತ ಅಧಿಕಾರಿಯಾದ ಶ್ರೀಮತಿ ಸುಮ, ಶ್ರೀ ರಂಗರಾಜು ಮತ್ತು ಕರಿಯಪ್ಪನವರು ಇದ್ದರು, ಗಾಂಜಾ ಸಿಕ್ಕಿದೆ ಅದನ್ನು ತೂಕ ಮಾಡಲು ನಮ್ಮ ಜೊತೆ ಬರಬೇಕೆಂದು ಶ್ರೀಮತಿ ಶಮೀನ್ ರವರು ತಿಳಿಸಿದಾಗ ಆತ ಅದಕ್ಕೆ ಒಪ್ಪಿದ್ದರಿಂದ ಆತನಿಗೆ ನೋಟೀಸ್ ನೀಡಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 13 : ಪ್ರಾ ಸಾ 4 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರೆಲ್ಲಾ ಇಲಾಖಾ ಜೀಪಿನಲ್ಲಿ ಮರಳೂರು ದಿಣ್ಣೆ ಮೂಲಕ ಅಂಕಿತ ಸ್ಕೂಲ್ ನ ಗ್ರೌಂಡ್ ಹತ್ತಿರ ಹೋದಾಗ ಅಲ್ಲಿ ಇಬ್ಬರು ಪೋಲೀಸರು, ಟಾಟಾ ಸಫಾರಿ ವಾಹನ ಮತ್ತು ಇಬ್ಬರು ವ್ಯಕ್ತಿಗಳು ಇದ್ದು, ಸದರಿ ವ್ಯಕ್ತಿಗಳು 1 ಮತ್ತು 2 ನೇ ಆರೋಪಿತರಾದ ನೀವು ಆಗಿದ್ದಿರಿ, ಶ್ರೀಮತಿ ಶಮೀನ್ ರವರು ನಿಮ್ಮ ಬಳಿ ಏನಿದೆ ಎಂದು ನಿಮ್ಮನ್ನು ಕೇಳಿದಾಗ ಗಾಂಜಾ ಇದೆ ಎಂದು ಹೇಳಿದಿರಿ, ನಂತರ ಪತ್ರಾಂಕಿತ ಅಧಿಕಾರಿಯಾದ ಸುಮರವರು ನಿಮ್ಮ ಅಂಗಶೋಧನೆ ಮಾಡಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 14 : ಪ್ರಾ ಸಾ 4 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಸಾದುಲ್ಲಾ ಶರೀಫ್ ನಿನ್ನ ಬಳಿ ಇದ್ದ ಗಾಂಜಾವನ್ನು ತೂಕ ಮಾಡಿದಾಗ ಒಟ್ಟು 7 ಕೆಜಿ 82 ಗ್ರಾಂ ತೂಕ ಕಂಡುಬಂತು, ನಂತರ ಆ ಪ್ಯಾಕೇಟನ್ನು ಬಿಳಿ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿ, ನಂತರ ತೂಕ ಮಾಡಿದಾಗ ಅದರ ತೂಕ 7 ಕೆಜಿ 138 ಗ್ರಾಂ ಇತ್ತು, ನಂತರ ನಿನ್ನ ಕೈಯಲ್ಲಿ

ಇದ್ದಂತಹ ಕವರಿನಲ್ಲಿ ಬಿಳಿಯ ಬಣ್ಣದ ಹರಳುಗಳ ತರಹ ವಸ್ತು ಇತ್ತು, ಅದನ್ನು ತೂಕ ಮಾಡಿದಾಗ 4.05 ಗ್ರಾಂ ತೂಕ ಕಂಡುಬಂತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 15 ಃ ಪ್ರಾ ಸಾ 4 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಇನ್ನೊಬ್ಬ ಆರೋಪಿ ಅಯೂಬ್ ಪಾಷ ನೀನು 25 ಕೆಜಿ ಸಾಮರ್ಥ್ಯದ ಅಕ್ಕಿ ಚೀಲದಲ್ಲಿದ್ದ ಗಾಂಜಾವನ್ನು ಹಾಜರುಪಡಿಸಿದ್ದು, ಅದನ್ನು ತೂಕ ಮಾಡಿದಾಗ 2 ಕೆಜಿ 849 ಗ್ರಾಂ ಇತ್ತು, ಅದನ್ನು ಬಿಳಿ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿ, ನಂತರ ತೂಕ ಮಾಡಿದಾಗ ಅದರ ತೂಕ 2 ಕೆಜಿ 892 ಗ್ರಾಂ ಇತ್ತು ಹಾಗೂ ಪೋಲೀಸರು ನಿಮ್ಮ ಬಳಿ ಇದ್ದ ಟಾಟಾ ಸಫಾರಿ ಕಾರನ್ನು, ಸಣ್ಣ, ಸಣ್ಣ ಪ್ಲಾಸ್ಟಿಕ್ ಕವರ್ ಗಳನ್ನು ಅಮಾನತ್ತುಪಡಿಸಿಕೊಂಡು, ಆ ಸಮಯದಲ್ಲಿ ಮಹಜರ್ ಮಾಡಿದ್ದು, ಸದರಿ ಮಹಜರಿಗೆ ಆತ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 16 ಃ ಪ್ರಾ ಸಾ 5 ಕೆ.ಎಸ್.ಶಾಂತಕುಮಾರ್, ಮುಖ್ಯ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿ.06.06.2022 ರಂದು ಅವರ ಠಾಣೆಯ ಆತ, ಹೆಚ್ ಸಿ 50 ಸೈಮನ್ ವಿಕ್ಟರ್ ಮತ್ತು ಹೆಚ್ ಸಿ 193 ನಯಾಜ್ ಪಾಷರವರು ಠಾಣಾ ಸರಹದ್ದಿನಲ್ಲಿ ಗಸ್ತು ಮಾಡುವಾಗ ಮರಳೂರು ದಿಣ್ಣೆಯ ಸಮೀಪ ಇರುವ ಅಂಕಿತ ಸ್ಕೂಲ್ ಪಕ್ಕದಲ್ಲಿ ಕೆಎ 01 ಎಂ ಡಿ 5009 ಟಾಟಾ ಸಫಾರಿ ವಾಹನ ಇದ್ದು, ಅದರ ಬಳಿ ಅವರು ಹೋದಾಗ ಅವರನ್ನು ನೋಡಿ ಅದರಲ್ಲಿದ್ದವರು ಗಾಬರಿಯಿಂದ ವಾಹನವನ್ನು ಚಲಾಯಿಸಿಕೊಂಡು ಹೋಗಲು ಪ್ರಯತ್ನಿಸುತ್ತಿದ್ದವರನ್ನು ಸುತ್ತುವರೆದು ಹಿಡಿದು ಅವರ ಹೆಸರು, ವಿಳಾಸ ಕೇಳಲಾಗಿ ಅಸಾದುಲ್ಲಾ ಶರೀಫ್ ಮತ್ತು ಇನ್ನೊಬ್ಬನು ಅಯೂಬ್ ಪಾಷ ಎಂದು ಹೇಳಿದ್ದು, ಸದರಿ ವ್ಯಕ್ತಿಗಳು 1 ಮತ್ತು 2ನೇ ಆರೋಪಿತರಾದ ನೀವು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 17 ಃ ಪ್ರಾ ಸಾ 5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಮ್ಮ ಬಳಿ 25 ಕೆಜಿ ಸಾಮರ್ಥ್ಯದ ಚೀಲ ಇದ್ದು, ಅದರ ಒಳಗೆ ಏನಿದೆ ಎಂದು ಕೇಳಿದಾಗ ಅದರ ಒಳಗೆ ಗಾಂಜಾ ಸೊಪ್ಪು ಇದೆ ಎಂದು ನೀವು ತಿಳಿಸಿದ್ದು, ಆ ಚೀಲವನ್ನು ತೆಗೆದು ನೋಡಲಾಗಿ ಅದರಲ್ಲಿ ಕಡ್ಡಿ, ಬೀಜ ಮತ್ತು ಗಾಂಜಾ ತರಹದ ಸೊಪ್ಪು ಇದ್ದು, ಅಸಾದುಲ್ಲಾ ಶರೀಫ್ ನಿನ್ನ ಕೈಯಲ್ಲಿ ಜಿಪ್ ಲಾಕ್ ಕವರಿದ್ದು, ಅದರಲ್ಲಿ ಎಂಡಿಎಂಎ ಕ್ರಿಸ್ಟಲ್ ಪೌಡರ್ ಇತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 18 ಃ ಪ್ರಾ ಸಾ 5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಿಮ್ಮಿಬ್ಬರನ್ನೂ ಮತ್ತು ವಾಹನವನ್ನು ನೋಡಿಕೊಳ್ಳಲು ಸೈಮನ್ ವಿಕ್ಟರ್ ಮತ್ತು ನಯಾಜ್ ಪಾಷರವರನ್ನು ಅಲ್ಲೇ ಬಿಟ್ಟು ಆತ ಸೈಬರ್ ಪೋಲೀಸ್ ಠಾಣೆಗೆ ಬಂದು ಪಿಎಸ್ಐ ರವರಿಗೆ ಬೆಳಿಗ್ಗೆ 11.00 ಗಂಟೆಗೆ ವರದಿ ನೀಡಿದ್ದಾಗಿ ಹಾಗೂ ಠಾಣಾ ಪಿಎಸ್ಐ ರವರು ಪ್ರಕರಣ ನೋಂದಾಯಿಸಿಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 19 ಃ ಪ್ರಾ ಸಾ 5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 12.30 ಗಂಟೆಗೆ ಆತ, ಪತ್ರಾಂಕಿತ ಅಧಿಕಾರಿಯಾದ ಶ್ರೀಮತಿ ಸುಮಾ, ಪಂಚ ಸಾಕ್ಷಿದಾರರಾದ ಕರಿಯಪ್ಪ, ರಂಗರಾಜು, ಕಾನೂನು ಮತ್ತು ಮಾಪನ ಶಾಸ್ತ್ರ ಇಲಾಖೆಯ ರಾಘವೇಂದ್ರ, ಶಿವಪ್ರಸಾದ್, ನಟರಾಜ್, ಪಿಎಸ್ಐ ಶಮೀನಾರವರರು ಇಲಾಖಾ ಜೀಪ್ ನಲ್ಲಿ ಘಟನಾ ಸ್ಥಳಕ್ಕೆ ಹೋಗಿದ್ದು, ಸುಮಾ ಮೇಡಂರವರು ನಿಮ್ಮ ಒಪ್ಪಿಗೆಯ ಮೇರೆಗೆ ನಿಮ್ಮ ಅಂಗಶೋಧನೆ ಮಾಡಿದಾಗ ಆರೋಪಿ ಅಸಾದುಲ್ಲಾ ಶರೀಫ್ ನಿನ್ನ ಕೈಯಲ್ಲಿ ಜಿಪ್ ಲಾಕ್ ಕವರ್ ಇತ್ತು ಹಾಗೂ ಅದರಲ್ಲಿ ಎಂಡಿಎಂಎ ಕ್ರಿಸ್ಟಲ್ ಪೌಡರ್ ಇತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 20 ಃ ಪ್ರಾ ಸಾ 5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದನ್ನು ಕಾನೂನು ಮತ್ತು ಮಾಪನ ಶಾಸ್ತ್ರ ಇಲಾಖೆಯ ರಾಘವೇಂದ್ರ ರವರು ತೂಕ ಮಾಡಿದಾಗ ಅದು 4.05 ಗ್ರಾಂ ಇತ್ತು,

ಅದನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆ ಚೀಲಕ್ಕೆ ಹಾಕಿ, ಸೀಲ್ ಮಾಡಿ ವಶಪಡಿಸಿಕೊಂಡಿದ್ದು, ಅನಂತರ ಅಸಾದುಲ್ಲಾ ನಿನ್ನ ಕೈಯಲ್ಲಿದ್ದ ಚೀಲವನ್ನು ತೆರೆದು ಪರಿಶೀಲನೆ ಮಾಡಿದಾಗ ಆ ಚೀಲದಲ್ಲಿ ಟೇಪ್ ಸುತ್ತಿದ ಪ್ಯಾಕೇಟ್ ಇತ್ತು, ಆ ಪ್ಯಾಕೇಟನ್ನು ತೂಕ ಮಾಡಿದಾಗ 7 ಕೆಜಿ 82 ಗ್ರಾಂ ಕಡ್ಡಿ, ಬೀಜಮಿಶ್ರಿತ ಗಾಂಜಾ ಕಂಡುಬಂತು, ಆ ಗಾಂಜಾವನ್ನು ಬಿಳಿ ಬಟ್ಟೆ ಚೀಲಕ್ಕೆ ಹಾಕಿ, ಮೊಹರು ಮಾಡಿ ವಶಪಡಿಸಿಕೊಂಡಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 21 : ಪ್ರಾ ಸಾ 5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಇನ್ನೊಬ್ಬ ಆರೋಪಿ ಅಯೂಬ್ ಪಾಷ ನಿನ್ನ ಕೈಯಲ್ಲಿ ಒಂದು ಸುತ್ತಿದ ಪ್ಲಾಸ್ಟಿಕ್ ಚೀಲ ಇತ್ತು, ಅದರಲ್ಲಿ 25 ಸಣ್ಣ, ಸಣ್ಣ ಜಿಪ್ ಲಾಕ್ ಕವರುಗಳು ಇದ್ದವು, ಚೀಲದಲ್ಲಿ ಇದ್ದಂತಹ ಗಾಂಜಾವನ್ನು ಸೇರಿಸಿ ತೂಕ ಮಾಡಿದಾಗ 2 ಕೆಜಿ 849 ಗ್ರಾಂ ಇತ್ತು, ಅದನ್ನು ಬಿಳಿ ಬಟ್ಟೆ ಚೀಲಕ್ಕೆ ಹಾಕಿ, ಸೀಲ್ ಮಾಡಿ ವಶಪಡಿಸಿಕೊಂಡು, ಆ ಬಗ್ಗೆ ಮಧ್ಯಾಹ್ನ 1.00-2.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಮಾದಕವಸ್ತುಗಳು ಮತ್ತು ವಾಹನವನ್ನು ವಶಪಡಿಸಿಕೊಂಡು, ಫೋಟೋ ತೆಗೆಯಲಾಯಿತು ಎಂದು ಹಾಗೂ ಸದರಿ ಮಹಜರಿಗೆ ಆತ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 22 : ಪ್ರಾ ಸಾ 5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಬೆಂಗಳೂರಿನಿಂದ ಬಾಂಬೆಗೆ ಹೋಗುವ ರಸ್ತೆಯಲ್ಲಿರುವ ಅಂತರಸನಹಳ್ಳಿ ಸರ್ವೀಸ್ ರಸ್ತೆಯಲ್ಲಿ ಒಬ್ಬ ಲಾರಿ ಚಾಲಕ ಆ ಮಾದಕ ವಸ್ತುಗಳನ್ನು ಕೊಟ್ಟಿದ್ದಾನೆಂದು ನೀವು ಹೇಳಿ, ಮಾದಕ ವಸ್ತುವನ್ನು ಖರೀದಿ ಮಾಡಿದ ಜಾಗವಾದ ESSAR ಕಂಪನಿಯ ಪೆಟ್ರೋಲ್ ಬಂಕಿನ ಹತ್ತಿರ ಅವರನ್ನು ಕರೆದುಕೊಂಡು ಹೋಗಿ ಸ್ಥಳ ತೋರಿಸಿದಂತೆ ಸ್ಥಳದಲ್ಲಿ ಮಹಜರ್ ಮಾಡಿ, ಫೋಟೋ ತೆಗೆಯಲಾಯಿತು ಎಂದು ಹಾಗೂ ಸದರಿ ಮಹಜರಿಗೆ ಆತ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 23 ಃ ಪ್ರಾ ಸಾ 6 ಡಾ.ವಿಶ್ವನಾಥರೆಡ್ಡಿ ಹೆಚ್. ವೈಜ್ಞಾನಿಕ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 21.06.2022 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತುಮಕೂರು ಸಿಇಎನ್ ಪೋಲೀಸ್ ಠಾಣೆಯಿಂದ ಕಳುಹಿಸಲ್ಪಟ್ಟ ಮೊಹರು ಮಾಡಲಾದ 3 ವಸ್ತುಗಳನ್ನು ಅವರ ಪ್ರಯೋಗಾಲಯದಲ್ಲಿ ಪರೀಕ್ಷೆಗಾಗಿ ಸ್ವೀಕರಿಸಿದ್ದು, ಅವುಗಳ ಸೀಲನ್ನು ತೆರೆದು ಪರೀಕ್ಷೆ ಮಾಡಿ, ಸದರಿ ವಸ್ತುಗಳು ಗಾಂಜಾ ಮತ್ತು ಮಾದಕ ವಸ್ತು ಎಂದು ವರದಿ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 24 ಃ ಪ್ರಾ ಸಾ 7 ನಟರಾಜ ಎನ್, ಮುಖ್ಯ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿ.06.06.2022 ರಂದು ಈ ಪ್ರಕರಣದಲ್ಲಿ ಮರಳೂರು ದಿಣ್ಣೆಯ ಅಂಕಿತ ಸ್ಕೂಲ್ ಹತ್ತಿರ ಮಾವಿನ ತೋಪಿನ ಬಳಿ ಸಾರ್ವಜನಿಕ ಸ್ಥಳದಲ್ಲಿ ಪಿಎಸ್ಐ ಶಮೀನ್ ರವರು ಹೇಳಿದ ಪ್ರಕಾರ ಗಾಂಜಾ, ಎಂಡಿಎಂಎ ಮತ್ತು ಟಾಟಾ ಸಫಾರಿ ವಾಹನವನ್ನು ಆರೋಪಿತರಾದ ಅಸಾದುಲ್ಲಾ ಶರೀಫ್ ಮತ್ತು ಅಯೂಬ್ ಪಾಷ ನಿಮ್ಮಿಂದ ಅಮಾನತ್ತುಪಡಿಸಿಕೊಂಡು ಮಹಜರ್ ಮಾಡುವಾಗ ಫೋಟೋ ತೆಗೆದು, ವಿಡಿಯೋ ಮಾಡಿ, ಸದರಿ ಮಹಜರಿಗೆ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 25 ಃ ಪ್ರಾ ಸಾ 7 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅಂತರಸನಹಳ್ಳಿ ESSAR ಪೆಟ್ರೋಲ್ ಬಂಕಿನ ಮುಂಭಾಗ ಲಾರಿಗಳು ನಿಲ್ಲಿಸುವ ಸ್ಥಳದಲ್ಲಿ ಮಹಜರ್ ಮಾಡುವ ಕಾಲಕ್ಕೆ ಫೋಟೋ ತೆಗೆದು, ವಿಡಿಯೋ ಮಾಡಿ, ಆ ಬಗ್ಗೆ ಪ್ರಮಾಣಪತ್ರವನ್ನು ನೀಡಿರುವುದಾಗಿ ಹಾಗೂ ಸದರಿ ಮಹಜರಿಗೆ ಆತ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 26 ಃ ಪ್ರಾ ಸಾ 8 ಶಿವಕುಮಾರ್ ಲಮಾಣಿ, ಪೋಲೀಸ್ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿ.17.06.2022 ರಂದು ಈ ಪ್ರಕರಣದಲ್ಲಿ ತುಮಕೂರಿನ 3 ನೇ ಹೆಚ್ಚುವರಿ ಹಿರಿಯ

ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಮಾನತ್ತುಪಡಿಸಿಕೊಂಡ ಗಾಂಜಾ ಮತ್ತು ಎಂಡಿಎಂಎ ಅನ್ನು ಇನ್ವೆಂಟರಿ ಮಾಡುವ ಸಮಯದಲ್ಲಿ ಫೋಟೋ ತೆಗೆದು, ವಿಡಿಯೋ ಮಾಡಿ ಆ ಬಗ್ಗೆ ಪ್ರಮಾಣಪತ್ರವನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 27 : ಪ್ರಾ ಸಾ 9 ಮೊಹಮದ್ ನವಾಜ್ ಶರೀಫ್ ತಮ್ಮ ಸಾಕ್ಷ್ಯದಲ್ಲಿ ಆರೋಪಿ ಅಸಾದುಲ್ಲಾ ಶರೀಫ್ ನೀನು ಆತನ ತಮ್ಮನಿದ್ದು, ನಿನ್ನ ಮೇಲೆ ಎನ್.ಡಿ.ಪಿ.ಎಸ್. ಪ್ರಕರಣ ಇರುವುದಾಗಿ ಹಾಗೂ ಆತನ ಹೆಸರಿನಲ್ಲಿ ಕೆಎ-01 ಎಂಡಿ-5009 ಟಾಟಾ ಸಫಾರಿ ಕಾರ್ ಇದ್ದು, ಸದರಿ ಕಾರನ್ನು 3 ವರ್ಷಗಳ ಹಿಂದೆ ನ್ಯಾಯಾಲಯಕ್ಕೆ ಅರ್ಜಿ ಮಾಡಿಕೊಂಡು ಬಿಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 28 : ಪ್ರಾ ಸಾ 10 ಪ್ರಮೋದ್ ತಮ್ಮ ಸಾಕ್ಷ್ಯದಲ್ಲಿ ದಿ.31.01.2023 ಗಾಂಜಾ ಪ್ರಕರಣದಲ್ಲಿ ಆರೋಪಿತರಾದ ನಿಮ್ಮ ಮುಖಾಂತರ ಪಂಚನಾಮೆ ಮಾಡುವಾಗ ಪಂಚರಾಗಬೇಕೆಂದು ಕೇಳಿ, ಆತನಿಗೆ ಪೋಲೀಸರು ನೋಟೀಸ್ ಕೊಟ್ಟಿದ್ದು, ಆ ಸಮಯದಲ್ಲಿ ಆರೋಪಿ ನವಾಜ್ ನೀನು ಪೋಲೀಸ್ ರ ಜೊತೆಗೆ ಇದ್ದು, ಪೋಲೀಸರು ಆತನನ್ನು ಜೀಪಿನಲ್ಲಿ ಬೆಂಗಳೂರಿನ ವಾಹನಕ್ಕೆ ಪಂಕ್ಚರ್ ಹಾಕುವ ಅಂಗಡಿಗೆ ಕರೆದುಕೊಂಡು ಹೋಗಿ, ಫೋಟೋ ತೆಗೆದುಕೊಂಡು ಪಂಚನಾಮೆ ಮಾಡಿದ್ದು, ಸದರಿ ಪಂಚನಾಮೆಗೆ ಆತ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 29 : ಪ್ರಾ ಸಾ 10 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ದಿವಸ ಸಿಇಎನ್ ಪೋಲೀಸ್ ಠಾಣೆಗೆ ಆತ ಹೋಗಿದ್ದಾಗ ಠಾಣೆಯಲ್ಲಿ ಇದ್ದಂತಹ ಆರೋಪಿ ನವಾಜ್ ನೀನು ಮಂಗಮ್ಮನಪಾಳ್ಯದಲ್ಲಿ ಹೆಚ್.ಕೆ.ಜಿ.ಎನ್.ಪಂಕ್ಚರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ತಮಿಳುನಾಡು ಮೂಲದ ಅಪರಿಚಿತ ವ್ಯಕ್ತಿ ಪಂಕ್ಚರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ

ವೇಳೆ ಟಯರ್ ಗೆ ಪಂಕ್ಚರ್ ಹಾಕಿಸಲು ಬರುತ್ತಿದ್ದಾಗ ನಿನಗೆ ಪರಿಚಯವಾಗಿದ್ದು, ಅಂಗಡಿಗೆ ಬಂದಾಗ ಸೇದಲು ಗಾಂಜಾ ಮತ್ತು ಎಂಡಿಎಂಎ ಅನ್ನು ಕೊಡುತ್ತಿದ್ದರು ಎಂದು ನೀನು ಹೇಳಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 30 : ಪ್ರಾ ಸಾ 10 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದನ್ನು ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದೆ ಎಂದು ಮತ್ತು ತುಮಕೂರಿನ 1 ನೇ ಆರೋಪಿ ಅಸಾದುಲ್ಲಾ ಶರೀಫ್ ನಿನಗೆ ಸ್ನೇಹಿತನಾಗಿದ್ದು, ಆ ಗಾಂಜಾವನ್ನು ಮತ್ತು ಎಂಡಿಎಂಎ ಅನ್ನು ಆಗಾಗ ಕೊಟ್ಟು ಮಾರಾಟ ಮಾಡಿಸುತ್ತಿದ್ದೆ ಎಂದು ನವಾಜ್ ನೀನು ಹೇಳಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 31 : ಪ್ರಾ ಸಾ 10 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.04.06.2022 ರಂದು ನಿನ್ನ ಸ್ನೇಹಿತನಾದ ಅಸಾದುಲ್ಲಾ ಶರೀಫ್ ತುಮಕೂರಿನಿಂದ ಬೆಂಗಳೂರಿಗೆ ಬಂದಿದ್ದು, ನೀನು ನಿನ್ನ ಬಳಿ ಇದ್ದ ಸುಮಾರು 4.05 ಗ್ರಾಂ ತೂಕದ ಎಂಡಿಎಂಎ ಯನ್ನು ಆತನಿಗೆ ಕೊಟ್ಟು, ಮಾರಾಟ ಮಾಡಿದ ನಂತರ ಹಣವನ್ನು ತಂದುಕೊಡು ಎಂದು ಹೇಳಿ ಕಳುಹಿಸಿದ್ದೆನು ಎಂದು ನೀನು ಪೋಲೀಸರ ಮುಂದೆ ಹೇಳಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 32 : ಪ್ರಾ ಸಾ 10 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದಾದ ಎರಡು ದಿವಸಗಳಲ್ಲಿ ಅಸಾದುಲ್ಲಾ ಶರೀಫ್ ತುಮಕೂರಿನಲ್ಲಿ ಪೋಲೀಸರಿಗೆ ಸಿಕ್ಕಿಹಾಕಿಕೊಂಡ ವಿಚಾರ ನಿನಗೆ ಗೊತ್ತಾಗಿದ್ದು, ಪೋಲೀಸರು ನಿನ್ನನ್ನು ಹುಡುಕಿಕೊಂಡು ಮಂಗಮ್ಮನಪಾಳ್ಯಕ್ಕೆ ಬಂದಿದ್ದರಿಂದ ನಿನಗೆ ಭಯವಾಗಿ ತಲೆಮರೆಸಿಕೊಂಡಿದ್ದಾಗಿ ನೀನು ಹೇಳಿದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 33 ಃ ಪ್ರಾ ಸಾ 11 ಮಾರುತೀಶ್ ಹೆಚ್.ಎನ್. ಪೋಲೀಸ್ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿ.31.01.2023 ರಂದು ಆತ ಈ ಪ್ರಕರಣದ 3 ನೇ ಆರೋಪಿ ನವಾಜ್ ನಿನ್ನ ಬೆಂಗಾವಲಿನಲ್ಲಿದ್ದು, ಬೆಂಗಳೂರು ನಗರ ಹೊಸೂರು ಮುಖ್ಯ ರಸ್ತೆಯಲ್ಲಿ ಮಂಗಮ್ಮನಪಾಳ್ಯದ ಗಾರೆಪಾಳ್ಯ ಆಟೋ ಸ್ಟಾಂಡಿನ ಹತ್ತಿರ ಹೆಚ್.ಕೆ.ಜಿ.ಎನ್. ಪಂಕ್ಚರ್ ಅಂಗಡಿಯ ಮುಂಭಾಗದಲ್ಲಿ ಮಾಡಿದ ಮಹಜರನ್ನು ಪಿಎಸ್ಐ ಶಮೀನ್ ರವರು ಉಕ್ತಲೇಖನ ಕೊಟ್ಟಂತೆ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 34 ಃ ಪ್ರಾ ಸಾ 12 ಸ್ಯಾಮ್ಯುಯಲ್ ಇವರು ತಮ್ಮ ಸಾಕ್ಷ್ಯದಲ್ಲಿ ದಿ.31.01.2023 ರಂದು ಸಿಇಎನ್ ಪೋಲೀಸ್ ಠಾಣೆಯ ಪೋಲೀಸರು ಆತನನ್ನು ಸಿಇಎನ್ ಪೋಲೀಸ್ ಠಾಣೆಗೆ ಕರೆಸಿದ್ದು, ಪೋಲೀಸ್ ಠಾಣೆಯಲ್ಲಿ 3 ನೇ ಆರೋಪಿಯಾದ ನವಾಜ್ ನೀನು ಇದ್ದು, ನೀನು ಆತನನ್ನು ಮತ್ತು ಪೋಲೀಸರನ್ನು ಬೆಂಗಳೂರಿನ ಬಂಡೆಪಾಳ್ಯದ ಮಂಗಮ್ಮನ ಪಾಳ್ಯದ ಪಂಕ್ಚರ್ ಅಂಗಡಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಪೋಲೀಸರು ಮಧ್ಯಾಹ್ನ 2.30-3.15 ಗಂಟೆಯವರೆಗೆ ಮಹಜರ್ ಮಾಡಿದ್ದು, ಸದರಿ ಮಹಜರಿಗೆ ಆತ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 35 ಃ ಪ್ರಾ ಸಾ 13 ಕೆ.ಎ.ಶಮೀನ್, ಪಿಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿ.06.06.2022 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಠಾಣಾ ಹೆಚ್ ಸಿ 388 ಶಾಂತಕುಮಾರ್ ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ, ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 36 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪ್ರಕರಣದ ದಾಳಿಗೆ ಹೋಗಲು ಮೇಲಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದ್ದು, ತುಮಕೂರು ಮಹಾನಗರ

ಪಾಲಿಕೆಯ ಆಯುಕ್ತರಿಗೆ ನೀಡಿದ ಮನವಿಯಂತೆ ಅವರು ಒಬ್ಬ ಪತ್ರಾಂಕಿತ ಅಧಿಕಾರಿ ಮತ್ತು ಇಬ್ಬರು ನೌಕರರನ್ನು ಪಂಚರಾಗಿ ನೇಮಕ ಮಾಡಿ ಕಳುಹಿಸಿದ್ದು, ಕಾನೂನು ಮಾಪನ ಇಲಾಖೆಯಿಂದ ರಾಘವೇಂದ್ರ ಎಂಬುವವರನ್ನು ಕಳುಹಿಸಿದ್ದು, ಅವರಿಗೆ ಈ ದಾಳಿಯ ಬಗ್ಗೆ ವಿವರಣೆ ನೀಡಿ, ನೋಟೀಸನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 37 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆಕೆ, ಪತ್ರಾಂಕಿತ ಅಧಿಕಾರಿ, ಪಂಚರು, ಶಾಂತಕುಮಾರ್, ಕಾನೂನು ಮಾಪನ ಇಲಾಖೆಯ ಅಧಿಕಾರಿ ರಾಘವೇಂದ್ರ, ಸಿಬ್ಬಂದಿಯವರು ಇಲಾಖಾ ವಾಹನದಲ್ಲಿ ಘಟನಾ ಸ್ಥಳಕ್ಕೆ ಫಿರ್ಯಾದಿ ತೋರಿಸಿದಂತೆ ಹೋಗಿ, ಸ್ಥಳದಲ್ಲಿ ಪೋಲೀಸರು ಹಿಡಿದುಕೊಂಡಿದ್ದ ಇಬ್ಬರು ವ್ಯಕ್ತಿಗಳ ಹೆಸರು ವಿಳಾಸ ಕೇಳಲಾಗಿ ಅಸಾದುಲ್ಲಾ ಶರೀಫ್ ಎಂದು ಮತ್ತು ಇನ್ನೊಬ್ಬ ಅಯೂಬ್ ಪಾಷ ಎಂದು ಹೇಳಿದ್ದು, ಸದರಿ ವ್ಯಕ್ತಿಗಳು ಆರೋಪಿತರಾದ ನೀವು ಎಂದು ನಿಮ್ಮನ್ನು ಗುರುತಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 38 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಕೆ ನಿಮ್ಮನ್ನು ನಿಮ್ಮ ಬಳಿ ಅಮಲು ಬರಿಸುವ ಮಾದಕ ವಸ್ತು ಗಾಂಜಾ ಇದೆಯೇ ಎಂದು ಕೇಳಿದಾಗ ನೀವು ನಿಮ್ಮ ಬಳಿ ಮಾದಕ ವಸ್ತು ಇದೆ ಎಂದು ಹೇಳಿದ್ದು, ಅದನ್ನು ಎಲ್ಲಿಂದ ತಂದಿರಿ ಎಂದು ಕೇಳಿದಾಗ ಅಂತರಸನಹಳ್ಳಿ ಬಳಿ ಡಾಬಾದ ಹತ್ತಿರ ಊಟಕ್ಕೆ ನಿಲ್ಲಿಸಿಕೊಂಡಿದ್ದಾಗ ಮಹಾರಾಷ್ಟ್ರದ ಜಲಗಾಂವ್ ನಿಂದ ಬಂದ ಲಾರಿ ಚಾಲಕನಿಂದ ದಿ.04.06.2022 ರಿಂದ ರಾತ್ರಿ ಸಮಯದಲ್ಲಿ ರೂ.50 ಸಾವಿರ ಕೊಟ್ಟು ಖರೀದಿ ಮಾಡಿರುವುದಾಗಿ ಹೇಳಿದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 39 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸ್ಥಳದಲ್ಲಿ ರೆಕಾರ್ಡ್ ಆಫ್ ರೀಸನ್ನು ಅನ್ನು ತಯಾರಿಸಿ, ನಂತರ ಪತ್ರಾಂಕಿತ ಅಧಿಕಾರಿ ನಿಮ್ಮ ಒಪ್ಪಿಗೆಯ ಮೇರೆಗೆ ನಿಮ್ಮ ಅಂಗಶೋಧನೆಯನ್ನು ಮಾಡಿ, ಆರೋಪಿ ಅಸಾದುಲ್ಲಾ ಶರೀಫ್ ನಿನ್ನನ್ನು ನಿನ್ನ

ಬಳಿ ಮಾದಕ ವಸ್ತು ಇದೆಯೇ ಎಂದು ಕೇಳಿದಾಗ ಹೌದು ಎಂದು ಹೇಳಿ ನಿನ್ನ ಬಳಿ ಇದ್ದ ಟೇಪಿನಲ್ಲಿ ಸುತ್ತಿದ ಪ್ಯಾಕೇಟನ್ನು ಹಾಜರುಪಡಿಸಿದ್ದು, ಅದನ್ನು ತೆರೆದು ಪರಿಶೀಲನೆ ಮಾಡಿದಾಗ ಸೊಪ್ಪು, ಬೀಜ, ಕಡ್ಡಿಸಹಿತ ಇರುವ ಗಾಂಜಾ ಇರುವುದು ಕಂಡುಬಂದಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 40 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದನ್ನು ರಾಘವೇಂದ್ರರವರು ತೂಕದ ಯಂತ್ರದ ಸಹಾಯದಿಂದ ತೂಕ ಮಾಡಿದಾಗ ಒಟ್ಟು 7 ಕೆಜಿ 82 ಗ್ರಾಂ ಇತ್ತು. ಅದನ್ನು ಪ್ರತ್ಯೇಕವಾಗಿ ಬಿಳಿ ಕೋರಾ ಬಟ್ಟೆ ಚೀಲದಲ್ಲಿ ಹಾಕಿ, ಸೀಲ್ ಮಾಡಿ ನಂತರ ತೂಕ ಮಾಡಿದಾಗ ಅದರ ತೂಕ 7 ಕೆಜಿ 138 ಗ್ರಾಂ ಕಂಡುಬಂದಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 41 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅಸಾದುಲ್ಲಾ ಶರೀಫ್ ನೀನು ಚಿಕ್ಕ ಪ್ಲಾಸ್ಟಿಕ್ ಜಿಪ್ ಲಾಕ್ ಕವರನ್ನು ಹಿಡಿದುಕೊಂಡಿದ್ದನ್ನು ಹಾಜರುಪಡಿಸಿದ್ದು, ಅದನ್ನು ತೆರೆದು ನೋಡಲಾಗಿ ಅದರಲ್ಲಿ ಎಂಡಿಎಂಎ ಕ್ರಿಸ್ಟಲ್ ಹರಳು ಇದ್ದವು, ಅದನ್ನು ಬೆಂಗಳೂರಿನ ನವಾಜ್ ಎಂಬುವವರಿಂದ ಖರೀದಿ ಮಾಡಿರುವುದಾಗಿ ಹೇಳಿದ್ದು, ಅದನ್ನು ರಾಘವೇಂದ್ರ ರವರು ತೂಕ ಮಾಡಿದಾಗ ಅದರ ಒಟ್ಟು ತೂಕ 04.05 ಗ್ರಾಂ ತೂಕ ಕಂಡುಬಂದಿತು, ಅದನ್ನು ತಿಳಿಹಸಿರು ಹಣ್ಣದ ಪೇಪರ್ ಕವರಿನಲ್ಲಿ ಹಾಕಿ, ಬಾಯಿ ಅಂಟಿಸಿ, ಸೀಲ್ ಮಾಡಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 42 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿ ಅಯೂಬ್ ಪಾಷ ನಿನ್ನನ್ನು ವಿಚಾರಿಸಲಾಗಿ ನೀನು ನಿನ್ನ ಬಳಿ ಇದ್ದ 25 ಕೆಜಿ ಸಾಮರ್ಥ್ಯದ ಅಕ್ಕಿ ಚೀಲದಲ್ಲಿ ತುಂಬಿದ್ದ ಗಾಂಜಾವನ್ನು ಹಾಜರುಪಡಿಸಿದ್ದು, ಅದನ್ನು ತೂಕ ಮಾಡಿದಾಗ 2 ಕೆಜಿ 849 ಗ್ರಾಂ ತೂಕ ಇತ್ತು, ಅದನ್ನು ಪ್ರತ್ಯೇಕವಾಗಿ ಬಿಳಿ ಕೋರಾ ಬಟ್ಟೆ ಚೀಲದಲ್ಲಿ ಇಟ್ಟು, ಬಾಯಿಯನ್ನು ಕಟ್ಟಿ, ಸೀಲ್ ಮಾಡಿ, ನಂತರ ತೂಕ ಮಾಡಿದಾಗ ಅದರ ತೂಕ

2 ಕೆಜಿ 892 ಗ್ರಾಂ ಕಂಡುಬಂದಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 43 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನೀವು 25 ಚಿಕ್ಕ ಪ್ಲಾಸ್ಟಿಕ್ ಜಿಪ್ ಲಾಕ್ ಕವರುಗಳನ್ನು ಕಾರಿನಲ್ಲಿಟ್ಟಿದ್ದನ್ನು ಹಾಜರುಪಡಿಸಿದ್ದು, ಅವುಗಳನ್ನು ತಿಳಿಹಸಿರು ಬಣ್ಣದ ಪೇಪರ್ ಕವರಿನಲ್ಲಿ ಹಾಕಿ, ಸೀಲ್ ಮಾಡಿ, ನಂತರ ಸ್ಥಳದಲ್ಲಿ ನಿಂತಿದ್ದ ಟಾಟಾ ಸಫಾರಿ ಕಾರ್ ನಂ.ಕೆಎ 01 ಎಂಡಿ 5009 ಅನ್ನು ತೋರಿಸಿ, ಅದೇ ಕಾರನ್ನು ಗಾಂಜಾ ಮತ್ತು ಎಂಡಿಎಂಎ ಸಾಗಾಟ ಮಾಡಲು ಉಪಯೋಗಿಸಿದ್ದು ಎಂದು ನೀವು ಹೇಳಿದ್ದರಿಂದ ಎಲ್ಲಾ ವಸ್ತುಗಳನ್ನು ವಶಕ್ಕೆ ಪಡೆದು, ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದು, ಸದರಿ ಸಮಯದಲ್ಲಿ ಫೋಟೋ ತೆಗೆಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 44 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಿಮ್ಮನ್ನು ವಿಚಾರಿಸಿದಾಗ ನೀವು ಸ್ವ ಇಚ್ಛಾ ಹೇಳಿಕೆ ನೀಡಿದ್ದು, ನೀವು ನಿಮ್ಮ ಹೇಳಿಕೆಯಂತೆ ಅವರನ್ನು, ಪತ್ರಾಂಕಿತ ಅಧಿಕಾರಿ ಮತ್ತು ಪಂಚರನ್ನು  ಬೆಂಗಳೂರು-ಪುಣೆ ಹೈ ವೇ ರಸ್ತೆಯಲ್ಲಿ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದ ESSAR ಪೆಟ್ರೋಲ್ ಬಂಕ್ ಮುಂಭಾಗದ ಲಾರಿಗಳು ನಿಲ್ಲುವ ಖಾಲಿ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿದ ಮೇರೆಗೆ  ಸ್ಥಳದಲ್ಲಿ ಮಹಜರ್ ಮಾಡಿ, ಫೋಟೋ ತೆಗೆಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 45 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಿಮ್ಮನ್ನು ಮಾಲುಗಳೊಂದಿಗೆ ಠಾಣೆಗೆ ಕರೆತಂದು, ದಸ್ತಗಿರಿ ಮಾಡಿ,  ರಿಮ್ಯಾಂಡ್ ಅರ್ಜಿಯೊಂದಿಗೆ

ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 46 : ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.17.06.2022 ರಂದು ತುಮಕೂರಿನ 3 ನೇ ಅಧಿಕ ಹಿರಿಯ ದಿವಾಣಿ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಆಕೆ, ಪಂಚರು, ಕಾನೂನು ಮಾಪನ ಶಾಸ್ತ್ರ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಹೋಗಿ, ನ್ಯಾಯಾಧೀಶರ ಮುಂದೆ ಅಮಾನತ್ತುಪಡಿಸಿಕೊಂಡ ಮುದ್ದೇಮಾಲುಗಳನ್ನು ಹಾಜರುಪಡಿಸಿ, ಗಾಂಜಾ ಹಾಗೂ ಎಂಡಿಎಂಎ ಗಳಿಂದ ಸ್ಯಾಂಪಲ್ ತೆಗೆದು, ಪ್ಯಾಕ್ ಮಾಡಿ, ಸೀಲ್ ಮಾಡಿ, ಇನ್ವೆಂಟರಿ ಮಹಜರ್ ಮಾಡಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 47 : ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.21.06.2022 ರಂದು ಅಮಾನತ್ತುಪಡಿಸಿಕೊಂಡ ಸ್ಯಾಂಪಲ್ ಗಾಂಜಾ ಮತ್ತು ಎಂಡಿಎಂಎ ಗಳನ್ನು ಎಫ್.ಎಸ್. ಎಲ್.ಗೆ ಕಳುಹಿಸಿ, ಸದರಿ ಗಾಂಜಾ ಮತ್ತು ಎಂಡಿಎಂಎ ಅನ್ನು 3 ನೇ ಆರೋಪಿ ನವಾಜ್ ನಿನ್ನಿಂದ ಖರೀದಿ ಮಾಡಿದ್ದೇವೆಂದು 1 ಮತ್ತು 2 ನೇ ಆರೋಪಿತರು ಹೇಳಿದ್ದರಿಂದ ನಿನ್ನ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಕ ಮಾಡಿ, ದಿ.28.08.2022 ರಂದು ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿ, 3 ನೇ ಆರೋಪಿ ನೀನು ತಲೆಮರೆಸಿಕೊಂಡಿರುವುದಾಗಿ ಹೇಳಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ : ಸುಳ್ಳು

ಪ್ರಶ್ನೆ 48 : ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 3 ನೇ ಆರೋಪಿ ನವಾಜ್ ನೀನು ನ್ಯಾಯಾಲಯಕ್ಕೆ ಶರಣಾಗತನಾಗಿದ್ದರಿಂದ ನಿನ್ನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು, ನಿನ್ನನ್ನು ಪೋಲೀಸ್ ಕಸ್ಟಡಿಗೆ ತೆಗೆದುಕೊಂಡು ನಿನ್ನ ಸ್ವ ಇಚ್ಛಾ

ಹೇಳಿಕೆಯನ್ನು ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 49 ಃ ಪ್ರಾ ಸಾ 13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.31.01.2023 ರಂದು ಸ್ಯಾಮ್ಯುಯಲ್ ಮತ್ತು ಪ್ರಮೋದ್ ರವರನ್ನು ಪಂಚರಾಗಿ ಬರಮಾಡಿಕೊಂಡು, ನಿನ್ನ ಸ್ವ ಇಚ್ಛಾ ಹೇಳಿಕೆಯ ಮೇರೆಗೆ 3ನೇ ಆರೋಪಿ ನವಾಜ್ ನೀನು ಅವರನ್ನು ನಿನಗೆ ಅಪರಿಚಿತ ವ್ಯಕ್ತಿ ಎಂಡಿಎಂಎ ಅನ್ನು ತಂದುಕೊಡುತ್ತಿದ್ದ ಬೆಂಗಳೂರು ನಗರ, ಹೊಸೂರು ಮುಖ್ಯ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಮಂಗಮ್ಮನ ಪಾಳ್ಯದ ಗಾರೆಪಾಳ್ಯ ಆಟೋ ಸ್ಟಾಂಡ್ ಹತ್ತಿರ ಇರುವ ಹೆಚ್.ಕೆ.ಜಿ.ಎನ್. ಪಂಕ್ಚರ್ ಅಂಗಡಿಯ ಮುಂಭಾಗಕ್ಕೆ ಕರೆದುಕೊಂಡು ಹೋಗಿ, ಸ್ಥಳ ತೋರಿಸಿದ ಮೇರೆಗೆ ಸ್ಥಳದಲ್ಲಿ ಮಹಜರ್ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಲು ಇಚ್ಛಿಸುವಿರಿ?

ಉತ್ತರ ಃ ಸುಳ್ಳು

ಪ್ರಶ್ನೆ 50 ಃ ನೀವು ಹೆಚ್ಚಿಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರ ಃ ಇಲ್ಲ

ಪ್ರಶ್ನೆ 51ಃ ನಿಮ್ಮ ಪರವಾಗಿ ಯಾರನ್ನಾದರೂ ಸಾಕ್ಷಿ ಮಾಡಲು ಅಥವಾ ದಾಖಲಾತಿಗಳನ್ನು ಹಾಜರು ಮಾಡಲು ಇಚ್ಛಿಸುವಿರಾ ?

ಉತ್ತರ ಃ ಇಲ್ಲ

(ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಿ, ಈ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಆತನು ಅರ್ಥ ಮಾಡಿಕೊಂಡು ನೀಡಿದ ಉತ್ತರಗಳನ್ನು ನನ್ನಿಂದ ನಮೂದಿಸಿಕೊಳ್ಳಲಾಯಿತು).

ಸಹಿ/-

(ಬಿ.ಜಯಂತ ಕುಮಾರ್)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು

ಸ್ಥಳಃ ತುಮಕೂರು

ದಿನಾಂಕಃ 02.06.2026